**ದಿನಾಂಕ 25.11.2024 ರಂದು ಅಪರಾಹ್ನ 04.30 ಗಂಟೆಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ 6ನೇ ರಾಜ್ಯ ಬ್ರಾಡ್ ಬ್ಯಾಂಡ್ ಸಮಿತಿ ಸಭೆಯ ನಡವಳಿಗಳು.**

ಹಾಜರಿದ್ದ ಸದಸ್ಯರು: ಪಟ್ಟಿ ಲಗತ್ತಿಸಿದೆ

ಸಭೆಗೆ ಹಾಜರಾದ ಸದಸ್ಯರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚೆ ನಡೆಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ: 1. ರಾಜ್ಯದಲ್ಲಿ ಸಂಪರ್ಕ ಜಾಲವಿಲ್ಲದ (ನೆಟ್ ವರ್ಕ್ ಸೌಲಭ್ಯ) ಗ್ರಾಮಗಳಿಗೆ ಸಂಪರ್ಕ ಜಾಲ ಒದಗಿಸುವ "4G Saturation ಯೋಜನೆ"ಯ ಪ್ರಗತಿ ಪರಿಶೀಲನೆ.**

DDG, DOT ಕರ್ನಾಟಕ, LSA ರವರು ಈ ಯೋಜನೆ ಕುರಿತಂತೆ ಸಭೆಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು.

1. **4ಜಿ ಸ್ಯಾಚುರೇಶನ್ ಯೋಜನೆ:**

ರಾಜ್ಯದಲ್ಲಿ ನೆಟ್ ವರ್ಕ್ ಸೌಲಭ್ಯವಿಲ್ಲದೆ ಇರುವ 1114 ಗ್ರಾಮಗಳಿವೆ. ಅವುಗಳಿಗೆ ನೆಟ್ ವರ್ಕ್ ಕವರೇಜ್ ಕಲ್ಪಿಸಲು ಒಟ್ಟು 829 ಟವರ್ ಗಳ ನಿರ್ಮಾಣಕ್ಕೆ BSNL ಯೋಜನೆ ರೂಪಿಸಿದೆ. ಇದಕ್ಕೆ ಬೇಕಾಗುವ ಸ್ಥಳಗಳನ್ನು ಜಿಲ್ಲಾಡಳಿತ ಮತ್ತು BSNL ಜಂಟಿಯಾಗಿ ಸರ್ವೇ ನಡೆಸಿ ಇದುವರೆಗೆ 798 ಸ್ಥಳಗಳನ್ನು ಗುರುತಿಸಿದೆ. ಈ ಸ್ಥಳಗಳು ಸರ್ಕಾರಿ ಭೂಮಿ, ಗ್ರಾಮಠಾಣ, ಅರಣ್ಯ, ಖಾಸಗಿ ಮತ್ತು BSNL ಒಡೆತನದ ಜಾಗಗಳಲ್ಲಿ ಬರುತ್ತಿದ್ದು ಆ ಸ್ಥಳಗಳಲ್ಲಿ 2,000 ಚ. ಅಡಿ ಜಾಗವನ್ನು ಟವರ್ ನಿರ್ಮಾಣಕ್ಕಾಗಿ BSNL ಗೆ ವಹಿಸಿ ಕೊಡಲು ಸಂಬಂಧಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು PCCF (Forest Conservation) ರವರಿಗೆ ತಿಳಿಸಲಾಗಿದೆ. ಕೇಂದ್ರ ಸರ್ಕಾರದ ಸೂಚನೆಯಂತೆ ಈ ನಿವೇಶನಗಳನ್ನು ಉಚಿತವಾಗಿ/ವಿನಾಯಿತಿ ದರದಲ್ಲಿ BSNL ಗೆ ಹಂಚಿಕೆ ಮಾಡಲು ಕಾನೂನುಗಳಲ್ಲಿ ಅವಕಾಶಗಳನ್ನು ಮಾಡಿಕೊಡಲಾಗಿದೆ. ಕಂದಾಯ ಇಲಾಖೆಯ ಒಡೆತನದ ಜಾಗಗಳಲ್ಲಿ ಬಾಕಿ ಉಳಿದಿರುವ 8 ನಿವೇಶನಗಳನ್ನು, ಮತ್ತು ಅರಣ್ಯ ಇಲಾಖೆಯ ಜಾಗಗಳಲ್ಲಿ ಗುರುತಿಸಲಾಗಿರುವ 149 ನಿವೇಶನ/ಜಾಗಗಳನ್ನು ವಹಿಸಿಕೊಡುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಕಂದಾಯ ಇಲಾಖೆಯಲ್ಲಿ ಬಾಕಿ ಉಳಿದಿರುವ ನಿವೇಶನಗಳು ಈ ಕೆಳಗಿನಂತಿವೆ:

| ಜಮೀನಿನ ಪ್ರಕಾರ | ಜಿಲ್ಲೆ | ಬಾಕಿ ಜಮೀನಿನ ಸಂಖ್ಯೆ | ಉಲ್ಲೇಖ |
|---|---|---|---|
| ಕಂದಾಯ ಭೂಮಿ | ಉತ್ತರ ಕನ್ನಡ | 2 | (ಅನುಬಂಧ-1) |
| | ಶಿವಮೊಗ್ಗ | 2 | |
| | ಮಂಡ್ಯ | 1 | |
| | ಧಾರವಾಡ | 1 | |
| | ಚಿಕ್ಕಬಳ್ಳಾಪುರ | 1 | |
| | ಬಾಗಲಕೋಟೆ | 1 | |

ಅರಣ್ಯ ಇಲಾಖೆಯ, ಅಪರ ಮುಖ್ಯ ಕಾರ್ಯದರ್ಶಿಯವರು ಮಾತನಾಡಿ, ಅರಣ್ಯ ಇಲಾಖೆಯ 270 ನಿವೇಶನಗಳಲ್ಲಿ 121 ನಿವೇಶನಗಳನ್ನು ಈಗಾಗಲೇ ಹಸ್ತಾಂತರಿಸಲಾಗಿದ್ದು ಈ ವಿಷಯಕ್ಕೆ ಸಂಬಂಧಿಸಿದ ಸಂಕ್ಷಿಪ್ತ ಮಾಹಿತಿ ಕೆಳಗಿನಂತೆ ನೀಡಲಾಗಿದ್ದು, ನೋಡಲ್ ಅಧಿಕಾರಿಗಳು ಬಾಕಿ ಪ್ರಕರಣಗಳನ್ನು ತೆರವುಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು.

| **ಅರಣ್ಯ ಭೂಮಿ**<br>**ವನ್ಯಜೀವಿ ಪರಿವೇಶ್ ದತ್ತಾಂಶ (63)** | | | | | | |
|---|---|---|---|---|---|---|
| | **ಇಲ್ಲ. ಸೈಟ್ ಗಳ ಸಂಖ್ಯೆ** | **ಇವರೊಂದಿಗೆ ಬಾಕಿ ಇದೆ** | | | | |
| | | **ಬಿಎಸ್ಎನ್ಎಲ್** | ***DFO** | **RO** | *** ನೋಡಲ್ ಅಧಿಕಾರಿ** | **ಸಚಿವಾಲಯ** |
| **NWLB ಅನುಮೋದಿಸಿದೆ** | **40** | 1 | 2 | 0 | 12 | 25 |
| **NWLB ಯಿಂದ ಅನುಮೋದಿಸಲ್ಪಟ್ಟಿಲ್ಲ** | **23** | 6 | 4 | 0 | 2 | 11 |

| **ವನ್ಯಜೀವಿಯೇತರ ಪ್ರಕರಣಗಳು (207)** | | | | | | |
|---|---|---|---|---|---|---|
| **ವಿವರಗಳು** | **ಸೈಟ್ ಗಳ ಸಂಖ್ಯೆ** | **ಬಾಕಿ ಉಳಿದಿರುವ ಸೈಟ್ ಗಳು** | | | | |
| | | **DFO** | **ನೋಡಲ್** | **IRO** | **ರಾಜ್ಯ** | **ಬಿಎಸ್ಎನ್ಎಲ್** |
| **ಅಂತಿಮ ಆದೇಶ ಹೊರಡಿಸಲಾಗಿದೆ** | **121** | | | | | |
| **ಹಂತ II / ಅಂತಿಮ ಆದೇಶಗಳಿಗೆ ಬಾಕಿ ಇದೆ** | **53** | **14** | **13** | **0** | **0** | 26(ಪಾವತಿಗೆ 20, ಅನುಸರಣೆ ಸಲ್ಲಿಕೆಗೆ 5 ಮತ್ತು ಇಡಿಎಸ್ ಗೆ 1) |
| **ಮೊದಲ ಹಂತದ ಅನುಮತಿಗಾಗಿ ಬಾಕಿ ಇದೆ** | **33** | **9** | **6** | **5** | **5** | **8** |
| **ಒಟ್ಟು** | **207** | | | | | |

ಈ ಬಗ್ಗೆ ಚರ್ಚೆ ನಡೆಸಿದ ನಂತರ ಸಭೆಯಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಈ ಕೆಳಕಂಡಂತೆ ಸೂಚನೆಗಳನ್ನು ನೀಡಿದರು.

1. ಮಂಜೂರಾತಿಗೆ ಬಾಕಿ ಇರುವ ಪ್ರಕರಣಗಳ ಪೈಕಿ ಇಲಾಖೆಗಳಲ್ಲಿ ಇತ್ಯರ್ಥಕ್ಕೆ ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು ಕೂಡಲೇ ಇತ್ಯರ್ಥ ಪಡಿಸಿ ನಿವೇಶನಗಳನ್ನು BSNL ಗೆ ಹಸ್ತಾಂತರಿಸಲು ಆಯಾ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಯಿತು.

2. ಕಂದಾಯ ಇಲಾಖೆಯ ಒಡೆತನದ ಜಾಗಗಳಲ್ಲಿ ಗುರುತಿಸಿದ ಸ್ಥಳಗಳ ಪ್ರಸ್ತಾವನೆಗಳನ್ನು ವಿಳಂಬ ಮಾಡದೆ ಸಂಬಂಧಿಸಿದ ಪ್ರಾದೇಶಿಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳು ತುರ್ತು ಕ್ರಮವನ್ನು ವಹಿಸಲು ಸೂಚಿಸಲಾಯಿತು.

3. ಅರಣ್ಯ ಇಲಾಖೆಯು BSNL ನಿಂದ ಸಲ್ಲಿಕೆಯಾಗುವ ಪ್ರಸ್ತಾವನೆಗಳನ್ನು ತುರ್ತಾಗಿ ಪರಿಶೀಲಿಸಿ, ಇತ್ಯರ್ಥ ಪಡಿಸಿ, ನಿವೇಶನಗಳನ್ನು ವಹಿಸಿಕೊಡಲು ತಿಳಿಸಿದರು.

4. BSNL ಗೆ ಈಗಾಗಲೇ ಹಸ್ತಾಂತರಿಸಿರುವ ನಿವೇಶನಗಳಲ್ಲಿ ಟವರ್ ನಿರ್ಮಾಣದ ಕೆಲಸ ಪ್ರಾರಂಭಿಸಲು BSNL ಗೆ ಸೂಚಿಸಲಾಯಿತು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ; ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ; PCCF (ಅರಣ್ಯ ಸಂರಕ್ಷಣೆ), ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಕಾರ್ಯದರ್ಶಿಗಳು, ವಿಮಾತಂ, ಜೈತಂ ಮತ್ತು ವಿತಂ ಇಲಾಖೆ, ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಮುಖ್ಯ ಪ್ರಧಾನ ವ್ಯವಸ್ಥಾಪಕರು, BSNL, ನಿರ್ದೇಶಕರು ಪಂಚಾಯತ್ ರಾಜ್, ನಿರ್ದೇಶಕರು , ವಿಮಾತಂ ಮತ್ತು ಜೈತಂ ಇಲಾಖೆ).

**2. ROW (ರೈಟ್ ಆಫ್ ವೇ)ಯ ಸಮಸ್ಯೆಗಳು:**

DDG, DOT ಕರ್ನಾಟಕ, LSA ರವರು ಈ ಯೋಜನೆ ಕುರಿತಂತೆ ಸಭೆಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು. ಡಾ. ನೀರಜ್ ಮಿತ್ತಲ್, IAS, ಕಾರ್ಯದರ್ಶಿಗಳು, DOT, ಕೇಂದ್ರ ಸರ್ಕಾರ ರವರು ರಾಜ್ಯ ಸರ್ಕಾರಕ್ಕೆ ದಿನಾಂಕ: 11ನೇ ನವೆಂಬರ್, 2024 ರಂದು ಬರೆದಿರುವ ಪತ್ರ DO ಸಂಖ್ಯೆ 5-6/2024 (186123)ರ ಬಗ್ಗೆ ಉಲ್ಲೇಖಿಸಿ, ಪತ್ರ ದಲ್ಲಿರುವ ROW ನಿಯಮಗಳು-2024ರ ಮುಖ್ಯಾಂಶಗಳನ್ನು ಈ ಕೆಳಕಂಡಂತೆ ವಿವರಿಸಿದರು:

- ಕೇಂದ್ರ ಸರ್ಕಾರದ Telecommunications Right of Way (RoW) ನಿಯಮಗಳನ್ನು 01.01.2025 ರಿಂದ ಕಡ್ಡಾಯವಾಗಿ ಎಲ್ಲಾ ರಾಜ್ಯಗಳು ಜಾರಿಗೆ ತರಬೇಕಾಗುತ್ತದೆ ಮತ್ತು ಇದರ ಬಗ್ಗೆ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ರಾಜ್ಯ ಸರ್ಕಾರದಿಂದ ನೀಡಬೇಕಾಗುತ್ತದೆ.
- ರಾಜ್ಯ ROW ಪೋರ್ಟಲ್ ಅನ್ನು 30.11.2024 ರೊಳಗೆ ನವೀಕರಿಸಬೇಕು, ಇಲ್ಲದಿದ್ದರೆ ರಾಜ್ಯ ಸರ್ಕಾರವು ಕೇಂದ್ರದ ದೂರಸಂಪರ್ಕ ಇಲಾಖೆಯು ಉನ್ನತೀಕರಿಸಿರುವ ROW ನೀತಿಯನ್ನು ಒಪ್ಪಿರುವುದೆಂದು ಭಾವಿಸಲಾಗುವುದು.
- ಅನುಮತಿಗಳು ಮತ್ತು ಅನುಮೋದನೆಗಳಿಗಾಗಿ ಡಿಜಿಟಲ್ ಪ್ರಕ್ರಿಯೆಗಳ ನಿಯಮಗಳು ಕಡ್ಡಾಯಗೊಳಿಸಲಾಗಿದೆ.
- ಸಾರ್ವಜನಿಕ ಸಂಸ್ಥೆಗಳ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು ಮತ್ತು ಪೋರ್ಟಲ್ನಲ್ಲಿ ಮಾಹಿತಿಯನ್ನು ನವೀಕರಿಸಬೇಕು.
- ಅನುಮತಿಗಳನ್ನು ಸ್ವೀಕರಿಸಲು ಮತ್ತು ಅನುಮೋದಿಸಲು ಎಲ್ಲಾ ಬಳಕೆದಾರ ಏಜೆನ್ಸಿಗಳನ್ನು ROW ಪೋರ್ಟಲ್ ಗೇ ಸಂಯೋಜಿಸಬೇಕು.

- ಹೆಚ್ಚುವರಿಯಾಗಿ, 5ಜಿ ಫಾರ್ಮ್ ಅನುಷ್ಠಾನದ ಅಗತ್ಯವಿದೆ. ಎಲ್ಲಾ ROW-ಸಂಬಂಧಿತ ಅನುಮೋದನೆಗಳಿಗಾಗಿ ಬಳಕೆದಾರ ಏಜೆನ್ಸಿಗಳು ಪೋರ್ಟಲ್ ಅನ್ನು ಬಳಸಿಕೊಳ್ಳಬೇಕು.

ಮೇಲಿನ ಅಂಶಗಳನ್ನು ಪರಿಗಣಿಸಿ, ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು ಎಲ್ಲಾ ಇಲಾಖೆಗಳಿಗೆ ಕೇಂದ್ರ ಸರ್ಕಾರದ ಪತ್ರದನ್ವಯ ಕ್ರಮಕೈಗೊಳ್ಳಲು ನಿರ್ದೇಶನ ನೀಡಲಾಗುವುದೆಂದು ತಿಳಿಸಿದರು. ಜನವರಿ 1 ರೊಳಗೆ ಸರ್ಕಾರದ ಎಲ್ಲ ಇಲಾಖೆಯ ದತ್ತಾಂಶ ಸೇರಿದಂತೆ ಎಲ್ಲಾ ಹಳೆಯ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಲು ಅವರು ಸೂಚಿಸಿದರು.

ಇ-ಆಡಳಿತ ಕೇಂದ್ರ ಮತ್ತು KSRAC ಇಲಾಖೆಯು , ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ , ನಗರಾಭಿವೃದ್ಧಿ, ಲೋಕೋಪಯೋಗಿ ಅರಣ್ಯ ಮತ್ತು ಕಂದಾಯ ಇಲಾಖೆಗಳ ROW ಡಿಜಿಟಲೀಕರಣಗೊಳಿಸುವ ಕುರಿತು ಸಮನ್ವಯದೊಂದಿಗೆ ಕಾರ್ಯಗತಗೊಳಿಸಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕದ ಇ-ಆಡಳಿತ ಕೇಂದ್ರದ (ಸಿಇಜಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ), ನಿರ್ದೇಶಕರು,KSRAC, ನಿರ್ದೇಶಕರು, ಪೌರಾಡಳಿತ ಇಲಾಖೆ, ಆಯುಕ್ತರು, ಪಂಚಾಯತ್ ರಾಜ್ ಇಲಾಖೆ, ಜಂಟಿ ನಿರ್ದೇಶಕರು, (MRC)).

- **ಬಾಕಿ ಇರುವ ROW ಅರ್ಜಿಗಳ ಕುರಿತು**:

| Dept. | Tower Pending | OFC Pending | Total | > 60 Days | Rejected |
|---|---|---|---|---|---|
| **BBMP** | 351 | 0 | 351 | 23 | 6479 |
| **UDD** | 509 | 123 | 632 | 394 | 3462 |
| **RDPR** | 0 | 0 | 0 | 0 | 100 |
| **Total** | **860** | **123** | **983** | **417** | **10041** |

DDG, DOT ಕರ್ನಾಟಕ, LSA ರವರು ಸಭೆಗೆ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಕಂಡಂತೆ ನೀಡಿದರು:

ಒಟ್ಟು 417 ಅರ್ಜಿಗಳು 60ಕ್ಕೂ ಹೆಚ್ಚು ದಿನಗಳಿಂದ ಬಾಕಿಯಿದ್ದು, 60 ದಿನಗಳ ನಂತರ ಡೀಮ್ಡ್ ಅನುಮೋದನೆಗಾಗಿ ವಿನ್ಯಾಸಗೊಳಿಸಲಾದ ವ್ಯವಸ್ಥೆಯಿದೆ. ಆದಾಗ್ಯೂ 417 ಅರ್ಜಿಗಳು ಬಾಕಿ ಉಳಿದಿವೆ.

ಕಳೆದ ಒಂದು ವರ್ಷದಿಂದ BBMP OFC ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ. ಭೌತಿಕ ಅರ್ಜಿಗಳನ್ನು ಸಹ ಸ್ವೀಕರಿಸಲಾಗುತ್ತಿಲ್ಲ, ಮತ್ತು ಲೋಕೋಪಯೋಗಿ ಇಲಾಖೆ ಭೌತಿಕ ಅರ್ಜಿಗಳನ್ನು ಸ್ವೀಕರಿಸುತ್ತಿರುವುದನ್ನು ತಿಳಿಸಿದರು.

ನಿರ್ದೇಶಕರು, ಲೋಕೋಪಯೋಗಿ ಇಲಾಖೆ ರವರು ಮಾತನಾಡಿ, ಕಳೆದ ಎರಡು ತಿಂಗಳಿನಿಂದ ಭೌತಿಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ಪೋರ್ಟಲ್ ರಚನೆಗಾಗಿ ಟೆಂಡರ್ ಕರೆದಿದ್ದು, ಮುಂದಿನ ತಿಂಗಳು ಪೋರ್ಟಲ್ ಸಿದ್ಧವಾಗಲಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯದರ್ಶಿಗಳು ಮಾತನಾಡಿ ಕೇಂದ್ರ ಸರ್ಕಾರದ ನಿರ್ದೇಶನದಂತೆ, ದಿನಾಂಕ 01/01/2025 ರಿಂದ ಎಲ್ಲಾ ಇಲಾಖೆಗಳು ತಮ್ಮಲ್ಲಿರುವ RoW ಪೋರ್ಟಲ್ ಅನ್ನು ಅಪ್ಡೇಟ್ ಮಾಡಿ ಬಳಸಬಹುದು. ಇಲ್ಲದಿದ್ದರೆ ಕೇಂದ್ರ ಸರ್ಕಾರದ RoW ಪೋರ್ಟಲ್ ಅನ್ನು ಬಳಸಲು ಅವಕಾಶವಿರುತ್ತದೆ. ಈಗಾಗಲೇ ಕೇಂದ್ರ ಸರ್ಕಾರದ RoW ಪೋರ್ಟಲ್ ಅನ್ನು ಬಳಸುವ ಅವಕಾಶ ಇರುವುದರಿಂದ ಇಲಾಖೆಗಳು ಮತ್ತೆ ಹೊಸದಾಗಿ RoW ಪೋರ್ಟಲ್ ಅನ್ನು ರಚಿಸುವ ಅವಶ್ಯಕತೆ ಇರುವುದಿಲ್ಲ ಎಂದು ಸೂಚಿಸಿದರು.

**ನಿರ್ಣಯಗಳು:**

1. **ಕೇಂದ್ರ ಸರ್ಕಾರದ ಪತ್ರದನ್ವಯ, Telecommunications Right of Way (RoW) ನಿಯಮಗಳನ್ನು 01.01.2025 ರಿಂದ ಕಡ್ಡಾಯವಾಗಿ ಎಲ್ಲಾ ರಾಜ್ಯಗಳು ಜಾರಿಗೆ ತರಬೇಕಾಗುತ್ತದೆ, ಮತ್ತು ಇದರ ಬಗ್ಗೆ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ರಾಜ್ಯ ಸರ್ಕಾರದಿಂದ ನೀಡಬೇಕಾಗುತ್ತದೆ. ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದ ಇಲಾಖೆಗಳಿಗೆ ಮುಖ್ಯ ಕಾರ್ಯದರ್ಶಿಗಳ ಕಚೇರಿಯಿಂದ ಸೂಕ್ತ ನಿರ್ದೇಶನ ನೀಡುವುದು.**

**2. ಕೇಂದ್ರ ಸರ್ಕಾರದ RoW ಪೋರ್ಟಲ್ ಅನ್ನು ಬಳಸುವ ಅಥವಾ ತಮ್ಮ ಇಲಾಖೆಯ RoW ಪೋರ್ಟಲ್ ಅನ್ನು ಬಳಸುವ ಬಗ್ಗೆ ಆಯಾ ಇಲಾಖೆಗಳು ತಕ್ಷಣವೇ ನಿರ್ಧಾರ ತೆಗೆದುಕೊಂಡು, ಮುಖ್ಯ ಕಾರ್ಯದರ್ಶಿಗಳ ಕಚೇರಿಗೆ ಮತ್ತು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ವರದಿ ನೀಡುವುದು.**

(**ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (ಸಿಇಒ)- ಇ-ಆಡಳಿತ ಕೇಂದ್ರ, ನಿರ್ದೇಶಕರು, ಪೌರಾಡಳಿತ ಇಲಾಖೆ, ಆಯುಕ್ತರು, ಪಂಚಾಯತ್ ರಾಜ್ ಇಲಾಖೆ, ಜಂಟಿ ನಿರ್ದೇಶಕರು, (MRC)).

**3. MOHUA ನೀತಿ ತಿದ್ದುಪಡಿಗಳ ಅಧಿಸೂಚನೆ:**

DDG, DOT ಕರ್ನಾಟಕ, LSA ರವರು ಈ ಯೋಜನೆ ಕುರಿತಂತೆ ಸಭೆಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು.

In-ಬಿಲ್ಡಿಂಗ್ ಸೊಲ್ಯೂಷನ್ಸ್ (IBS) ತಿದ್ದುಪಡಿಗಳಿಗಾಗಿ ಕರಡು ಅಧಿಸೂಚನೆಯನ್ನು ಜುಲೈ 2024 ರಲ್ಲಿ ಹೊರಡಿಸಲಾಗಿದ್ದು, ಎಲ್ಲಾ ಸಲಹೆಗಳು ಅಥವಾ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ, ಅದನ್ನು ಅಂತಿಮಗೊಳಿಸಲಾಗುತ್ತದೆ ಮತ್ತು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದು ಮಾನ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರು ಸಭೆಗೆ ತಿಳಿಸಿದರು.

ಕಟ್ಟಡ ಬೈಲಾಗಳನ್ನು ಪ್ರಕಟಿಸಲು ತಕ್ಷಣ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿದರು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ. ಪಿ, ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ).

### 4. NMP ಪೋರ್ಟಲ್ ಡೇಟಾ ಅಪ್ಲೋಡ್:

ಮೂಲಸೌಕರ್ಯ ಯೋಜನೆಗಾಗಿ street furniture ದತ್ತಾಂಶವನ್ನು ರಾಷ್ಟ್ರೀಯ ಮಾಸ್ಟರ್ ಪ್ಲಾನ್ (NMP) ನಲ್ಲಿ ನಿಗದಿತ ನಮೂನೆಯಲ್ಲಿ ಸಂಯೋಜಿಸುವುದು ಬಾಕಿ ಇರುತ್ತದೆ. ಈಗಿರುವ ಮಾಹಿತಿಯು ಈ ಕೆಳಗಿನಂತಿರುತ್ತದೆ :

| Sl. No. | Data of layers | Dept. | No. of data layers |
|---|---|---|---|
| | | **Shared the Data** | **Uploaded** |
| 1 | Traffic light poles | Home Dept. | 617 |
| 2 | Bus terminal and bus shelters | Transport Dept. | 48,060 |
| 3 | Government buildings (State Govt./Central Govt./PSU) | PWD | 4,379 |
| 4 | Electric Poles (HT&LT) | Energy Dept. | 20,82,614 |
| 5 | Village Habitations | Revenue Dept. | 30,387 |
| 6 | Petrol / Diesel Outlets (Chitradurga, Mandya & Bengaluru Rural District) | Urban Development Dept. | 154 |
| | **Total** | | **21,66,211** |

ಮೂಲಸೌಕರ್ಯ ಯೋಜನೆಗಾಗಿ street furniture ದತ್ತಾಂಶವನ್ನು ಮ್ಯಾಪಿಂಗ್ ಮಾಡಲಾಗಿದ್ದು, ಅದು ನಿರೀಕ್ಷಿತ ಸ್ವರೂಪದಲ್ಲಿಲ್ಲ ಎಂದು ನೋಡಲ್ ಅಧಿಕಾರಿಯಾದ ಶ್ರೀ ಈಶ್ವರ್, ಡಿಜಿಎಂ, ಕೆಎಸ್ಐಐಡಿಸಿ ತಿಳಿಸಿದರು.

ಎಲ್ಲಾ ಮೂಲಸೌಕರ್ಯಗಳ ಮಾಹಿತಿಯನ್ನು ಮ್ಯಾಪ್ ಮಾಡಲು, ಇ-ಆಡಳಿತ ಇಲಾಖೆಯು ಇತರ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಮತ್ತು KSRAC ನೊಂದಿಗೆ ಲಭ್ಯವಿರುವ ಮಾಹಿತಿಯನ್ನು ಮ್ಯಾಪ್ ಮಾಡಲು ಇ-ಆಡಳಿತ ಇಲಾಖೆಗೆ ಮಾನ್ಯ ಅಧ್ಯಕ್ಷರು ಸೂಚಿಸಿದರು, ಮತ್ತು ಇ-ಆಡಳಿತ ಕೇಂದ್ರ (ಸಿಇಜಿ) CEG- ನೋಡಲ್ ಇಲಾಖೆಯಾಗಿ ಮಾಹಿತಿಯನ್ನು ಸಂಗ್ರಹಿಸಿ NMP ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಸೂಚಿಸಿದರು.

**(ಕ್ರಮ:** ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (ಸಿಇಒ)- ಇ-ಆಡಳಿತ ಕೇಂದ್ರ, ನಿರ್ದೇಶಕರು, KSRAC)

**5. CBUD (ಕಾಲ್ ಬಿಫೋರ್ ಯೂ ಡಿಗ್) ಅಪ್ಲಿಕೇಶನ್ ಅನುಷ್ಠಾನ:**

ಟೆಲಿಕಾಂ ಮತ್ತು ಇತರ ಮೂಲಸೌಕರ್ಯಗಳಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ರಸ್ತೆ ಹಾಗು ಸಾರ್ವಜನಿಕ ಸ್ಥಳಗಳಲ್ಲಿ ಗುಂಡಿಗಳನ್ನು ತೋಡುವಾಗ ಆ ಪ್ರದೇಶದಲ್ಲಿ ಮೊದಲೆ ಇರುವ ಕೇಬಲ್, ಪೈಪ್-ಲೈನ್ ಇತ್ ಮತ್ತು ಇತರೆ ಭೂಮಿ ಒಳಗಿನ ಸ್ವತ್ತುಗಳ ರಕ್ಷಣೆ ಮಾಡಿಕೊಳ್ಳಲು ಸಂಬಂಧಿಸಿದವರಿಗೆ CBuD app ಮೂಲಕ ಮುಂಗಡ ಮಾಹಿತಿ ಕಳಿಸಿ ಗುಂಡಿಗಳನ್ನು ತೋಡುವ ಕಾರ್ಯ ನಡೆಸಬೇಕೆಂಬ ನಿಯಮ ಜಾರಿಯಲ್ಲಿದೆ. ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ಮುಖ್ಯ ಕಾರ್ಯದರ್ಶಿಗಳಿಂದ ಈಗಾಗಲೇ ನಿರ್ದೇಶನ ನೀಡಲಾಗಿರುತ್ತದೆ ಎಂಬ ವಿಚಾರವನ್ನು ಸಭೆಯ ಗಮನಕ್ಕೆ ತರಲಾಯಿತು.

| Total Asset Owners | Departments | Agencies | Tehsil | Registered Excavators | Total Enquiry Received | Ongoing Enquiry | Unauthorized Excavation |
|---|---|---|---|---|---|---|---|
| 1886 | 10 | 143 | 5557 | 564 | 705 | 9 | 41 |

ರಾಜ್ಯದ ಎಲ್ಲ ಯುಟಿಲಿಟಿ ಏಜೆನ್ಸಿಗಳು CBuD app ನಲ್ಲಿ ಮುಂಗಡ ಮಾಹಿತಿ ನೀಡದೆ ಸಾರ್ವಜನಿಕ ಸ್ಥಳಗಳಲ್ಲಿ ಗುಂಡಿಗಳನ್ನು ತೋಡುವ ಕಾರ್ಯ ನಡೆಸದಿರುವಂತೆ ಕ್ರಮ ವಹಿಸಲು ಎಲ್ಲ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಯಿತು, ಮತ್ತು DOT ರವರು ಎಲ್ಲಾ ಪಾಲುದಾರರಿಗೆ CBUD ಅಪ್ಲಿಕೇಶನ್‌ನ ಬಳಕೆಯ ಬಗ್ಗೆ ತರಬೇತಿ ಮತ್ತು ಮಾಹಿತಿಯನ್ನು SMS ಮುಖಾಂತರ ಪ್ರಚಾರ ಮಾಡಲು ಸೂಕ್ತ ಕ್ರಮಕೈಗೊಳಲು ತಿಳಿಸಿದರು. ಡಕ್ಟ್ಸ್ (Ducts) ಲಭ್ಯವಿರುವ ಸ್ಥಳಗಳಲ್ಲಿ, ಭೂಮಿಯನ್ನು ಅಗೆಯಲು ಹೊಸ ಅನುಮತಿಯನ್ನು ನೀಡಲಾಗುವುದಿಲ್ಲ ಮತ್ತು ಆ ಪ್ರದೇಶದಲ್ಲಿ ಈಗಾಗಲೇ ಲಭ್ಯವಿರುವ DUCTS ಗಳನ್ನು ಬಳಸಿಕೊಂಡು ಅನುಮತಿಗೆ ಅರ್ಜಿ ಸಲ್ಲಿಸಬೇಕು ಎಂದು ಅಧ್ಯಕ್ಷರು DoT ಗೆ ಸೂಚಿಸಿದರು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು-ನಗರಾಭಿವೃದ್ಧಿ ಇಲಾಖೆ, ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಅಧ್ಯಕ್ಷರು, BWSSB, ಜಂಟಿ ನಿರ್ದೇಶಕರು, (MRC), DDG, DOT ಕರ್ನಾಟಕ).

**6. ಕೌಶಲ್ಯ ಅಭಿವೃದ್ಧಿ ಉಪಕ್ರಮಗಳು**

ಮುಂಬರುವ ದಿನಗಳಲ್ಲಿ ಟೆಲಿಕಾಂ ವಲಯದಲ್ಲಿ ಅಗತ್ಯವಿರುವ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವ ಅಗತ್ಯವನ್ನು ಪೂರೈಸಲು ITI ಗಳಲ್ಲಿ 15% ಮತ್ತು ಪಾಲಿಟೆಕ್ನಿಕ್‌ಗಳಲ್ಲಿ

75% ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ-ಕೋರ್ಸ್‌ಗಳನ್ನು(ICT) ಪರಿಚಯಿಸಲು DDG, DOT ರಾಜ್ಯ ಸರ್ಕಾರಕ್ಕೆ ವಿನಂತಿಸಿದರು.

5G, IoT, AI ತಂತ್ರಜ್ಞಾನಗಳ ಕಡೆಗೆ ಗಮನ ನೀಡಲು ಕೇಂದ್ರ ಸರ್ಕಾರ ಸೂಚನೆ ನೀಡಿದ್ದು, ಈ ಸಂಬಂಧ KSDC ಯು ಐ.ಟಿ.ಐ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ICT ಕೋರ್ಸ್ ಗಳನ್ನು ಸಂಯೋಜಿಸುತ್ತಿದೆ, ಮತ್ತು TSSC (Telecom Sector Skill Council) ಯು ಮೂಲಸೌಕರ್ಯ ಅಭಿವೃದಿ ಮತ್ತು 5G-ನಿರ್ದಿಷ್ಟ ತರಬೇತಿಯಲ್ಲಿ ಸಹಾಯ ಮಾಡುತ್ತಿದೆ. 5 ರಿಂದ 10 ಐಟಿಐಗಳಿಗೆ ಆಪ್ಟಿಕಲ್ ಟ್ರಾನ್ಸ್ಪರ್ ತಂತ್ರಜ್ಞ ತರಬೇತಿ ನೀಡಲಾಗುವುದು ಎಂದು ನಿರ್ದೇಶಕರು, KSDC ರವರು ಸಭೆಗೆ ತಿಳಿಸಿದರು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೌಶಲ್ಯ ಅಭಿವೃದ್ಧಿಗೆ ಬೇಕಾಗಿರುವ ಕಾಲೇಜುಗಳನ್ನು ಗುರಿತಿಸಲು ಕೌಶಲ್ಯ ಅಭಿವೃದ್ಧಿ ಇಲಾಖೆಗೆ ಅಧ್ಯಕ್ಷರು ಸೂಚಿಸಿದರು, ಮತ್ತು ಇತ್ತೀಚೆಗೆ ಘೋಷಿಸಿರುವ ನಿಪುಣ ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಕೂಡ ಪರಿಶೀಲಿಸಲು ತಿಳಿಸಿದರು.

[ಕ್ರಮ: ನಿರ್ದೇಶಕರು, KSDC, DDG, DOT ಕರ್ನಾಟಕ].

**7. ಭಾರತ್ ನೆಟ್ ಯೋಜನೆ**

ಭಾರತ್ ನೆಟ್ ಯೋಜನೆ ಮತ್ತು OFC ಸಂಪರ್ಕ ನವೀಕರಣ ಸಂಬಂಧಿಸಿದಂತೆ , ಪ್ರಥಮ ಹಂತವನ್ನು ಬಿ. ಎಸ್. ಎನ್. ಎಲ್ ರವರು ಪೂರ್ಣಗೊಳಿಸಿದ್ದು, ಮೂರನೇ ಹಂತದಲ್ಲಿ ಎಲ್ಲಾ 2.5 ಲಕ್ಷ ಗ್ರಾಮ ಪಂಚಾಯತ್‌ಗಳಿಗೆ 100 MBPS ವೇಗದ ಅಂತರ್ಜಾಲ ಸಂಪರ್ಕ ನೀಡುವ ಉದ್ದೇಶವಿದ್ದು, 6.4 ಲಕ್ಷ ಹಳ್ಳಿಗಳಿಗೆ 100 MBPS ವೇಗದ ಅಂತರ್ಜಾಲ ಸಂಪರ್ಕ ನೀಡಲು DoT ಯು ಪ್ರಯತ್ನಿಸುತ್ತಿದೆ. OFC ಸಂಪರ್ಕವನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ವಿಸ್ತರಿಸಲಾಗಿದ್ದು, ಹಳ್ಳಿಗಳ ಮಟ್ಟಕ್ಕೆ ವಿಸ್ತರಣೆ ಮಾಡಲು ಕರ್ನಾಟಕದಲ್ಲಿ 31,000 ಕಿ. ಮೀ ವರೆಗೆ OFC cableಗಳನ್ನು ಅಳವಡಿಸಲು DoT ಯು ಯೋಜನೆ ನಿರೂಪಿಸಿದೆ, ಮತ್ತು ಇದಕ್ಕೆ ಬೇಕಾಗಿರುವ ಸಹಕಾರವನ್ನು ರಾಜ್ಯ ಸರ್ಕಾರಕ್ಕೆ DDG, DOT ರವರು ಮನವಿ ಮಾಡಿಕೊಂಡಿರುತ್ತಾರೆ.

ಭಾರತ್ ನೆಟ್ ಯೋಜನೆಗೆ ಸಂಬಂಧ ಪಟ್ಟಂತೆ ರಾಜ್ಯ ಸರ್ಕಾರದಿಂದ ಅವಶ್ಯವಿರುವ ಸಹಕಾರದ ಹೊರತಾಗಿಯೂ ಭಾರತ್ ನೆಟ್ ಹಂತ 1 ಮತ್ತು 2 ಸಂಪೂರ್ಣವಾಗಿ ಪೂರ್ಣಗೊಂಡಿರುವುದಿಲ್ಲ ಎಂಬ ವಿಷಯವನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರು DDG, DOT ಯ ಗಮನಕ್ಕೆ ತಂದರು. ಈ ಕಾಮಗಾರಿಗಳನ್ನು ತಕ್ಷಣವೇ ಗುರುತಿಸಿ ಮುಕ್ತಾಯಗೊಳಿಸಲು ಸೂಚಿಸಲಾಯಿತು.

**8. ಡಿಜಿಟಲ್ ಸಂವಹನ ಸಿದ್ಧತಾ ಸೂಚ್ಯಂಕ (ಡಿಸಿಆರ್‌ಐ) ಅನುಷ್ಠಾನ**

ಡಿಸಿಆರ್‌ಐ(DCRI) ಅನುಷ್ಠಾನದ ಮೇಲ್ವಿಚಾರಣೆಗಾಗಿ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಅಂತರ-ಇಲಾಖಾ ಸಮನ್ವಯ ಸಮಿತಿ (ಐಡಿಸಿಸಿ)ಯನ್ನು ರಚಿಸಲಾಗಿದೆ. ಈ ಸಮಿತಿಯು ನಿಯೋಜಿತ ಸಿಂಗಲ್ ಪಾಯಿಂಟ್ ಆಫ್ ಕಾಂಟ್ಯಾಕ್ಟ್ (SPOC) ಗಳೊಂದಿಗೆ ರಾಜ್ಯ ಇಲಾಖೆಗಳ ಸೂಚಕಗಳನ್ನು ಮ್ಯಾಪಿಂಗ್ ಮಾಡುವುದು, ತ್ರೈಮಾಸಿಕ ವಿಮರ್ಶೆಗಳು ಮತ್ತು ದೂರಸಂಪರ್ಕ ಇಲಾಖೆಗೆ ವರದಿಯನ್ನು ನೀಡುವುದು, ಹಾಗೂ ಐಸಿಟಿ ಏಕೀಕರಣಕ್ಕಾಗಿ ಉತ್ತಮ ಅಭ್ಯಾಸಗಳ ಪರಿಚಯ ಮಾಡುವ ಕಾರ್ಯವನ್ನು ಮಾಡುತ್ತದೆ.

ಸಂಬಂಧಪಟ್ಟ ಇಲಾಖೆಗಳು ತಕ್ಷಣವೇ ಡಿಸಿಆರ್‌ಐ ದತ್ತಾಂಶವನ್ನು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ಸಲ್ಲಿಸಲು ಸೂಚಿಸಲಾಯಿತು. ಇಲಾಖೆಗಳು ಸಲ್ಲಿಸಿದ ಮಾಹಿತಿಯನ್ನು ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು. ಇಲಾಖೆಗಳಿಂದ ಬರಬೇಕಾಗಿರುವ ಮಾಹಿತಿಯನ್ನು ತಕ್ಷಣವೇ ನೀಡುವ ಬಗ್ಗೆ, ಆಯಾ ಇಲಾಖೆಗಳಿಗೆ, ಮುಖ್ಯ ಕಾರ್ಯದರ್ಶಿಗಳ ಕಚೇರಿಯಿಂದ ಪತ್ರಗಳನ್ನು ಕಳುಹಿಸಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ಸೂಚಿಸಿದರು.

**(ಕ್ರಮ:** ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕೌಶಲ್ಯ ಅಭಿವೃದ್ಧಿ ಇಲಾಖೆ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಬಿ. ಡಿ. ಎ ಮತ್ತು ಸಂಬಂಧಿಸಿದ ಇಲಾಖೆಗಳು)

**9. ಇಂಧನ ಸಚಿವಾಲಯದ ಸಲಹೆಯನ್ನು ಅಳವಡಿಸಿಕೊಳ್ಳುವುದು:**

DDG, DOT ರವರು ಇಂಧನ ಸಚಿವಾಲಯಕ್ಕೆ ಸಂಬಂಸಿದಂತೆ ಈ ಕೆಳಗಿನ ಪ್ರಮುಖ ಶಿಫಾರಸ್ಸುಗಳನ್ನು ಪ್ರಸ್ತಾಪಿಸಿದರು :

1) (Bulk Application): ಬಳಕೆದಾರರಿಗೆ ಒಂದೇ ಬಾರಿಗೆ ಹಲವಾರು ಅರ್ಜಿಗಳನ್ನು ಅಪ್ ಲೋಡ್ ಮಾಡಲು ಅನುವು ಮಾಡಿಕೊಡುವಂತೆ ಕೋರಿದರು.

2) ವಿಭಾಗವಾರು ಏಕೀಕೃತ ಬಿಲ್/ಇನ್‌ವಾಯ್ಸ್ ರಚಿಸುವುದು (Division wise single bill): ಪ್ರತಿಯೊಂದು ವಿಭಾಗಕ್ಕೂ (Division wise bill) ಒಂದೇ ಬಿಲ್/ಇನ್‌ವಾಯ್ಸ್ ಅನ್ನು ರಚಿಸಲು ಅನುವು ಮಾಡಿಕೊಡುವಂತೆ ಕೋರಿದರು.

3) ಕೈಗಾರಿಕಾ ದರ (Industrial rate): ಮೊಬೈಲ್ ಟವರ್ ಗಳಿಗೆ ವಿದ್ಯುತ್ ಸಂಪರ್ಕವನ್ನು ಕೈಗಾರಿಕಾ ದರದಲ್ಲಿ ಒದಗಿಸುವಂತೆ ಕೋರಿದರು.

ನಿರ್ದೇಶಕರು(ತಾಂತ್ರಿಕ), BESCOM ರವರು ಮಾತನಾಡಿ ವಿಭಾಗವಾರು ಏಕೀಕೃತ ಬಿಲ್ ಅನ್ನು ನೀಡಲು ಈಗಾಗಲೇ ಕ್ರಮವಹಿಸಿದ್ದು ಅನುಷ್ಠಾನಕ್ಕೆ ತರುವ ಕಾರ್ಯ ಪ್ರಗತಿಯಲ್ಲಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ:** ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ ಅವರು ಈ ಸಲಹೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ವಹಿಸಲು ಸೂಚಿಸಲಾಯಿತು).

**10. ಇತರ ಸಮಸ್ಯೆಗಳು**

COAI ಪ್ರತಿನಿಧಿಯ ಯವರು ಬಿಬಿಎಂಪಿ ಮೋಬೈಲ್ ಟವರ್‌ಗಳ ಮೇಲೆ ಆಸ್ತಿ ತೆರಿಗೆ ವಿಧಿಸುವ ವಿಷಯವನ್ನು ಮಂಡಿಸಿದರು. ಹೊಸ ಟೆಲಿಕಾಂ ಕಾನೂನುಗಳು ಮತ್ತು ನಿಯಮಗಳ ಪ್ರಕಾರ, ಟೆಲಿಕಾಂ ಮೂಲಸೌಕರ್ಯಗಳನ್ನು ಆಸ್ತಿ ತೆರಿಗೆಗೆ ಒಳಪಡಿಸಬಾರದು. ಇದು ಕೈಗಾರಿಕೆಗೆ ಆರ್ಥಿಕಭಾರವನ್ನು ಹೇರುತ್ತದೆ ಎಂದು ಸಭೆಗೆ ತಿಳಿಸಿ, ಸಂಬಂಧಿತ ಏಜೆನ್ಸಿಗಳೊಂದಿಗೆ ಈ ವಿಷಯವನ್ನು ಪರಿಹರಿಸಿಕೊಡಬೇಕಾಗಿ ಮಾನ್ಯ ಮುಖ್ಯ ಕಾರ್ಯದರ್ಶಿಯಾವರಿಗೆ ವಿನಂತಿಸಿದರು.

DIPA ಪ್ರತಿನಿಧಿ ಯವರು ROW ಅರ್ಜಿಗಳನ್ನು ಕೆಲವು ಇಲಾಖೆಗಳು ಯಾವುದೇ ಕಾರಣವನ್ನು ನೀಡದೆ ತಿರಸ್ಕರಿಸುತ್ತಿರುವದನ್ನು ಸಭೆಯ ಗಮನಕ್ಕೆ ತಂದರು ಮತ್ತು 10,000ಕ್ಕೂ ಹೆಚ್ಚು ಅರ್ಜಿಗಳನ್ನು ನಿರ್ಧರಿತ ಕಾರಣಗಳಿಲ್ಲದೆ ತಿರಸ್ಕರಿಸಲಾಗಿದೆ ಎಂದು ತಿಳಿಸಿದರು. ಕಾರಣಗಳನ್ನು ನೀಡಿ ಅರ್ಜಿಗಳನ್ನು ತಿರಸ್ಕರಿಸಿದರೆ, ಅರ್ಜಿದಾರರಿಗೆ ಮುಂದಿನ ಸೂಕ್ತ ಕ್ರಮ ಕೈಗೊಂಡು, ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅನುಕೂಲವಾಗುತ್ತದೆ ಎಂದು ಸಭೆಗೆ ತಿಳಿಸಿದರು.

RELIANCE ಪ್ರತಿನಿಧಿ ಮಾತನಾಡಿ ಅರ್ಜಿಗಳನ್ನು ಸರಿಪಡಿಸಿ ಪುನಃ ಸಲ್ಲಿಸಲು ಅವಕಾಶ ಕಲ್ಪಿಸಬೇಕು, ಮತ್ತು ಅರ್ಜಿಗಳನ್ನು ಸಂಪೂರ್ಣ ತಿರಸ್ಕರಿಸಿದರೆ, 30 ದಿನಗಳಲ್ಲಿ ಹಣವನ್ನು ಹಿಂತಿರುಗಿಸಲು ಕ್ರಮ ಕೈಗೊಳ್ಳುವಂತೆ ಎಲ್ಲಾ ಇಲಾಖೆಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ವಿನಂತಿಸಿದರು.

- ಈ ಸಂಬಂಧ ಮುಖ್ಯ ಕಾರ್ಯದರ್ಶಿಯವರು DOT ಅಧಿಕಾರಿಗಳಿಗೆ ಪ್ರತಿ ತಿಂಗಳ ವರದಿಯನ್ನು ಸಲ್ಲಿಸಲು ಸೂಚಿಸಿದರು (ಠೇವಣಿ ಆದ ಮೊತ್ತ ಮತ್ತು ಹಿಂತಿರುಗಿಸಲಿರುವ ಮೊತ್ತವನ್ನು, ಏಜೆನ್ಸಿ-ವಾರು ಪಾವತಿಸುವ ವಿವರದ ಕುರಿತು)

- ROW ಅರ್ಜಿಗಳಿಗೆ ಕುರಿತು ಬಿ. ಬಿ. ಎಂ. ಪಿ , ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಿರಾಕರಣೆಯ ಕಾರಣ ನೀಡಲು ಪೋರ್ಟಲ್ ನಲ್ಲಿ (Rejection reason) ಕಡ್ಡಾಯ ಮಾಡಲು ಮತ್ತು ಬಾಕಿ ಇರುವ ಠೇವಣಿ ಮೊತ್ತ ಹಿಂತಿರುಗಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಯಿತು.

- ದುರ್ಬಲ ಸಂಪರ್ಕವಿರುವೆಡೆ, ವಿಶೇಷವಾಗಿ ಸಾರ್ವಜನಿಕ ಸ್ಥಳಗಳಲ್ಲಿ, ಸಂಪರ್ಕ ಜಾಮ್ ಆಗುತ್ತದೆ. ಏರೋ ಶೋ ನಂತಹ ಪ್ರತಿವರ್ಷ ಜರುಗುವ, ಹೆಚ್ಚು ಜನ ಸೇರುವ ಕಾರ್ಯಕ್ರಮಗಳಿಗೆ ಶಾಶ್ವತ ಪರಿಹಾರ ನೀಡಲು ಮಾನ್ಯ ಮುಖ್ಯಕಾರ್ಯದರ್ಶಿಗಳು DoT ಗೆ ಸಲಹೆ ನೀಡಿದರು.

**(ಕ್ರಮ:** ಬಿ. ಬಿ. ಎಂ. ಪಿ, ನಗರಾಭಿವೃದ್ಧಿ / ಡಿ. ಎಂ. ಎ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ದೂರಸಂಪರ್ಕ ಇಲಾಖೆ).

ಮಾನ್ಯ ಅಧ್ಯಕ್ಷರಿಗೆ ಮತ್ತು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳಿಗೆ ವಂದನೆಗಳನ್ನು ಅರ್ಪಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಡಾ. ಶಾಲಿನಿ ರಜನೀಶ್)**
ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ

## ಅನುಬಂಧ-1:

| ಬಾಕಿ ಇರುವ ಕಂದಾಯ ಭೂಮಿ | | | | |
|---|---|---|---|---|
| SL ಸಂಖ್ಯೆ | ಕಂದಾಯ ಜಿಲ್ಲೆ | ತಾಲ್ಲೂಕು | ಗ್ರಾಮ | ಭೂ ಹಂಚಿಕೆಯ ಪ್ರಸ್ತುತ ಸ್ಥಿತಿ |
| 1 | ಉತ್ತರ ಕನ್ನಡ | ಶಿರಸಿ | ಬಲ್ಲಾರ್ | ಸೊಪ್ಪಿನಬೆಟ್ಟ ಭೂಮಿ: ಸ.ನಂ.05 ಮತ್ತು 108ರ ಭೂ ಹಂಚಿಕೆಗೆ ಸಂಬಂಧಿಸಿದಂತೆ 2024ರ ಸೆ.20 ಮತ್ತು ಅ.23ರಂದು ಜಿಲ್ಲಾಧಿಕಾರಿಗಳು ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಎಫ್, ಮುಂದಿನ ಪ್ರಕ್ರಿಯೆಗೆ ಭಾರತ ಸರ್ಕಾರದಿಂದ ಅರಣ್ಯ ಅನುಮತಿ ಅಗತ್ಯವಿದೆ ಎಂದು ಸಲಹೆ ನೀಡಿದ್ದಾರೆ. |
| 2 | ಉತ್ತರ ಕನ್ನಡ | ಸಿದ್ದಾಪುರ | ಲಕ್ಕಬ್ಬೆಕೇರಿ | ಸೊಪ್ಪಿನಬೆಟ್ಟ ಭೂಮಿ: ಸ.ನಂ.05 ಮತ್ತು 108ರ ಭೂ ಹಂಚಿಕೆಗೆ ಸಂಬಂಧಿಸಿದಂತೆ 2024ರ ಸೆ.20 ಮತ್ತು ಅ.23ರಂದು ಜಿಲ್ಲಾಧಿಕಾರಿಗಳು ಅರಣ್ಯ ಇಲಾಖೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪತ್ರ ಬರೆದಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಡಿಸಿಎಫ್, ಮುಂದಿನ ಪ್ರಕ್ರಿಯೆಗೆ ಭಾರತ ಸರ್ಕಾರದಿಂದ ಅರಣ್ಯ ಅನುಮತಿ ಅಗತ್ಯವಿದೆ ಎಂದು ಸಲಹೆ ನೀಡಿದ್ದಾರೆ. |
| 3 | ಶಿವಮೊಗ್ಗ | ಹೊಸನಗರ | ಆಡಗೋಡಿ | ಹೊಸ ನಿವೇಶನ - ಸ.ನಂ.79ನ್ನು ಗುರುತಿಸಲಾಗಿದ್ದು, ಇದು ಅರಣ್ಯ ಭೂಮಿ ಎಂದು ಸೂಚಿಸಿರುವ ಹೊಸನಗರ ತಹಶೀಲ್ದಾರ್ ರಶ್ಮಿ (7338401775) ಅವರ ಬಳಿ ಬಾಕಿ ಇದೆ. ಆದಾಗ್ಯೂ, ಬಿಎಸ್ಎನ್ಎಲ್ ಪ್ರಕಾರ, ಇದನ್ನು ಕಂದಾಯ ಭೂಮಿ ಎಂದು ವರ್ಗೀಕರಿಸಲಾಗಿದೆ. |

| | | | | |
|---|---|---|---|---|
| 4 | ಶಿವಮೊಗ್ಗ | ಸಾಗರ | ತಲವಾಟಾ | ಹೊಸ ನಿವೇಶನವನ್ನು ಸ.ನಂ.86 ಎಂದು ಗುರುತಿಸಲಾಗಿದ್ದು, ಬಿಎಸ್ ಎನ್ ಎಲ್ ನಿಂದ ಸಾಗರದ ತಹಶೀಲ್ದಾರ್ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು. |
| 5 | ಮಂಡ್ಯ | ಕೃಷ್ಣರಾಜಪೇಟೆ | ಬೇಡದಹಳ್ಳಿ | ಹೊಸ ನಿವೇಶನ- ಇತ್ತೀಚೆಗೆ ಪಂಚಾಯತ್ ನಿಂದ ಕಂದಾಯಕ್ಕೆ ಸ್ಥಳಾಂತರಿಸಲಾಗಿದೆ.<br>ಬಿಎಸ್‌ಎನ್‌ಎಲ್, ಬಿಎಸ್‌ಎನ್‌ಎಲ್ ಇನ್ನೂ ಗುರುತಿಸದ ಭೂಮಿಯನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ಹುಡುಕಲಾಗುತ್ತಿದೆ ಆದರೆ ಜಿಲ್ಲಾಧಿಕಾರಿ ಕಚೇರಿ ಲಕ್ಷ್ಮಿ ಶಿರಸ್ತೇದಾರ್ -9164121423 ನಲ್ಲಿ ಬಾಕಿ ಇದೆ |
| 6 | ಧಾರವಾಡ | ಕಲಘಟಗಿ | ಜಿ.ಬಸವನಕೊಪ್ಪ | ಸ.ನಂ.47ರ ಮರು ಸಮೀಕ್ಷೆ ಪೂರ್ಣಗೊಂಡಿದ್ದು, ಸಮೀಕ್ಷೆಯ ವರದಿಯನ್ನು ಕಲಘಟಗಿಯ ತಹಶೀಲ್ದಾರರಿಂದ ಅನುಮೋದನೆಗಾಗಿ ಜಿಲ್ಲಾಧಿಕಾರಿಗೆ ಸಲ್ಲಿಸಲಾಗುವುದು. ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿದ ನಂತರ ಒಂದು ವಾರದೊಳಗೆ ಭೂಮಿ ಹಂಚಿಕೆ ಮಾಡಲಾಗುವುದು.<br><br>9448515659-ವೀರೇಶ ಮುಳುಗುಂದಮಠ ತಹಶೀಲ್ದಾರ್ |
| 7 | ಚಿಕ್ಕಬಳ್ಳಾಪುರ | ಗೌರಿಬಿದನೂರು | ನಡುವಲಹಳ್ಳಿ | ಸ.ನಂ:42 - ಸರ್ವೆ ಮತ್ತು ಅನುಮೋದನೆಯನ್ನು ಜಿಲ್ಲಾಧಿಕಾರಿಗಳು ಪೂರ್ಣಗೊಳಿಸಿದ್ದು, ಭೂಮಿಯ ಅಧಿಸೂಚನೆಗಾಗಿ ತಹಶೀಲ್ದಾರ್ ಗೆ ಪತ್ರವನ್ನು ಕಳುಹಿಸಲಾಗಿದೆ.<br><br>ಮಹೇಶ್ ಪತ್ರಿ-8296517144 - ತಹಶೀಲ್ದಾರ್ |

| | | | | |
|---|---|---|---|---|
| 8 | ಬಾಗಲಕೋಟೆ | ಬೀಳಗಿ | ಬಾದರದಿನ್ನಿ ಪು. ಕೆ | **ಸ್ಥಳ ಗುರುತಿಸುವಿಕೆ:** ಕೆಬಿಜೆಎನ್ಎಲ್ ಬಾಗಲಕೋಟೆಯಿಂದ ಪೂರ್ಣಗೊಂಡಿದೆ ಮತ್ತು ಕೆಬಿಜೆಎನ್ಎಲ್ ಬೆಂಗಳೂರು ಪ್ರಧಾನ ಕಚೇರಿಗೆ ಬರೆದ ಪತ್ರ **ಅನುಮೋದನೆ ಬಾಕಿ:** ಸದರಿ ಸ್ಥಳವನ್ನು ಕೆಬಿಜೆಎನ್ಎಲ್ ಮಂಡಳಿಯ ಅನುಮೋದನೆಗಾಗಿ ಇಡಬೇಕಾಗಿದೆ. ಮಂಡಳಿಯ ಅಧ್ಯಕ್ಷತೆಯನ್ನು ಗೌರವಾನ್ವಿತ ಮುಖ್ಯಮಂತ್ರಿಗಳು ವಹಿಸುತ್ತಾರೆ. **ಮುಂದಿನ ಹಂತಗಳು**: ಈ ಪ್ರಸ್ತಾಪವನ್ನು ಮಂಡಳಿಯ ಸಭೆಯ ಕಾರ್ಯಸೂಚಿಗಳಲ್ಲಿ ಒಂದಾಗಿ ಸೇರಿಸಲಾಗಿದೆ ಮತ್ತು ಮುಂದಿನ ಮಂಡಳಿ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು |

| ದಿನಾಂಕ 25.11.2024 ರಂದು 6ನೇ ರಾಜ್ಯ ಬ್ರಾಡ್ ಬ್ಯಾಂಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳ ವಿವರ | | |
|---|---|---|
| | **ಹೆಸರು ಮತ್ತು ಹುದ್ದೆ** | **ಇಲಾಖೆ/ಸಂಸ್ಥೆ** |
| 1 | ಡಾ. ಶಾಲಿನಿ ರಜನೀಶ್, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು | ಕರ್ನಾಟಕ ಸರ್ಕಾರ |
| 2 | ಶ್ರೀ. ಎನ್.ಮಂಜುನಾಥ್ ಪ್ರಸಾದ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು | ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. |
| 3 | ಶ್ರೀ. ಗೌರವ್ ಗುಪ್ತಾ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು | ಇಂಧನ ಇಲಾಖೆ |
| 4 | ಡಾ. ಎಸ್. ಸೆಲ್ವಕುಮಾರ್, ಐ.ಎ.ಎಸ್. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು | ಲೋಕೋಪಯೋಗಿ ಇಲಾಖೆ. |
| 5 | ಡಾ. ಏಕ್ರೂಪ್ ಕೌರ್, ಐಎಎಸ್ , ಸರ್ಕಾರದ ಕಾರ್ಯದರ್ಶಿಗಳು | ವಿ ,ಮಾ ತಂ , ಜೈ ತಂ ಹಾಗೂ ವಿ ತಂ ಇಲಾಖೆ |
| 6 | ಶ್ರೀ ಉಜ್ವಲ್ ಕುಮಾರ್ ಘೋಷ್, ಐಎಎಸ್, ಸರ್ಕಾರದ ಕಾರ್ಯದರ್ಶಿಗಳು , | ಡಿಪಿಎಆರ್ (ಇ-ಆಡಳಿತ) |
| 7 | ಶ್ರೀಮತಿ ದೀಪಾ ಎಂ, ಐಎಎಸ್, ಸರ್ಕಾರದ ಕಾರ್ಯದರ್ಶಿಗಳು | ನಗರಾಭಿವೃದ್ಧಿ ಇಲಾಖೆ |
| 8 | ಶ್ರೀ. ಬ್ರಿಜೇಶ್ ಕುಮಾರ್- ಐಎಫ್ಎಸ್ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | ಅರಣ್ಯ ಇಲಾಖೆ |
| 9 | ಅನಿತಾ, ಐಪಿಎಸ್, ಅಪರ ಪೊಲೀಸ್ ಮಹಾನಿರ್ದೇಶಕರುರು (ಕಾನೂನು ಮತ್ತು ಸುವ್ಯವಸ್ಥೆ), ಟ್ರಾಫಿಕ್, ಬೆಂಗಳೂರು | (ಕಾನೂನು ಮತ್ತು ಸುವ್ಯವಸ್ಥೆ), ಟ್ರಾಫಿಕ್ |
| 10 | ಡಾ.ನಂದಿನಿದೇವಿ ಕೆ., ಐ.ಎ.ಎಸ್. | ಇ-ಆಡಳಿತ |
| 11 | ಶ್ರೀ. ದರ್ಶನ್ ಎಚ್.ವಿ, ಐಎಎಸ್, ನಿರ್ದೇಶಕರುರು | ವಿ ,ಮಾ ತಂ , ಜೈ ತಂ ಇಲಾಖೆ |
| 12 | ಶ್ರೀ.ನಾಗರಾಜ ಭವಾನಿ, | ಪ್ರಧಾನ ವ್ಯವಸ್ಥಾಪಕರು, ಇವೆಂಟ್ಸ್ ಅಂಡ್ ಪ್ರೊಮೋಷನ್ಸ್, ಕಿಟ್ಸ್ |
| 13 | ಮಾಧುರಿ ಮಾಯಾಚಾರಿ | ಸಹಾಯಕ ವ್ಯವಸ್ಥಾಪಕರು ,ಇವೆಂಟ್ಸ್ ಅಂಡ್ ಪ್ರೊಮೋಷನ್ಸ್,ಕಿಟ್ಸ್ |
| 14 | ಡಾ.ರಾಜೇಶ್ ಎನ್.ಎಲ್, ವ್ಯವಸ್ಥಾಪಕ ನಿರ್ದೇಶಕರುರು | ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ |
| 15 | ವ್ಯವಸ್ಥಾಪಕ ನಿರ್ದೇಶಕರು, ಶ್ರೀ ವಿದ್ಯಾ. ಪಿ ಐ,, ಐಎಎಸ್ | ಕೌಶಲ್ಯ ಮಿಷನ್ |
| 16 | ಶ್ರೀಮತಿ ಟಿ ಪೂಂಕೋಟಿ ಡಿಡಿಜಿ ಗ್ರಾಮೀಣ 1, ಕೆಟಿಕೆ ಎಲ್ಎಸ್ಎ ಡಾಟ್ | ದೂರಸಂಪರ್ಕ ಇಲಾಖೆ |
| 17 | ಶ್ರೀ. ಎಸ್.ರವಿಕುಮಾರ್, ನಿರ್ದೇಶಕರು, ಗ್ರಾಮೀಣ 1, ಕೆಟಿಕೆ, ಎಲ್ಎಸ್ಎ ಡಾಟ್ | ದೂರಸಂಪರ್ಕ ಇಲಾಖೆ |

| | | |
|---|---|---|
| 18 | ಶ್ರೀ. ಅಖಿಲೇಶ್ ಕೆಆರ್ ಗುಪ್ತಾ ಎಸ್ಪಿಎಲ್ ಡಿಜಿಟಿ ಕೆಟಿಕೆ ಎಲ್‌ಎಸ್‌ಎ | ದೂರಸಂಪರ್ಕ ಇಲಾಖೆ |
| 19 | ಶ್ರೀ. ಬ್ರಹ್ಮಯ್ಯ ಡೈರೆಕ್ಟರ್ ಗ್ರಾಮಾಂತರ 2 | ದೂರಸಂಪರ್ಕ ಇಲಾಖೆ |
| 20 | ಶ್ರೀ. ಶಿವಣ್ಣ, ಸಹಾಯಕ ನಿರ್ದೇಶಕರು, ಗ್ರಾಮೀಣ ಕೆಟಿಕೆ ಎಲ್‌ಎಸ್‌ಎ | ದೂರಸಂಪರ್ಕ ಇಲಾಖೆ |
| 21 | ಶ್ರೀ. ಸುಭಾಷ್ ಕೆ ಮಳಖೇಡೆ (ಪಿಸಿಸಿಎಫ್, ವನ್ಯಜೀವಿ) | ಅರಣ್ಯ ಇಲಾಖೆ |
| 22 | ಶ್ರೀ. ಎಸ್ ವಿ ಸುರೇಂದ್ರನಾಥ್ | ಲೋಕೋಪಯೋಗಿ ಇಲಾಖೆ.ಉಪ ಮುಖ್ಯ ಇಂಜಿನಿಯರ್ |
| 23 | ಶ್ರೀ. ಅಲ್ಪೇಶ್ ದೇಸಾಯಿ, ಎಜಿಎಂ (4ಜಿ ಸ್ಯಾಚುರೇಶನ್) | ಬಿಎಸ್‌ಎನ್‌ಎಲ್ |
| 24 | ಶ್ರೀ. ಲಕ್ಷ್ಮೀಜಿ ಪಿ ಸೈಂಟಿಫಿಕ್ ಓಫಿಸರ | ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ |
| 25 | ಶ್ರೀ. ಈಶ್ವರ, ಜನರಲ್ ಮ್ಯಾನೇಜರ್ | ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ |
| 26 | ಶ್ರೀ. ಎಸ್.ಮಲ್ಲೇಶ | ಸಾರಿಗೆ (ದಕ್ಷಿಣ) ಇಲಾಖೆ |
| 27 | ಶ್ರೀ. ಎ.ಕೆ. ಗುಪ್ತಾ | Spl.DGP |
| 28 | ಶ್ರೀ. ನಾಗರಾಜ್ ಪಿ.ಕೆ. | ಜೆಡಿ, ಸಿಐಟಿಇ, ಬೆಂಗಳೂರು |
| 29 | ಶ್ರೀ. ಪುಟ್ಟ ಸ್ವಾಮಿ ಎಚ್.ಪಿ. | ಪೊಲೀಸ್ ಪ್ರಕಟಣೆ, |
| 30 | ಶ್ರೀ. ಜಿ ಕುಮಾರ್ ಸ್ವಾಮಿ | ಐ&ಸಿ, ಕೈಗಾರಿಕಾ ಆಯುಕ್ತ |
| 31 | ಶ್ರೀ. ಎಂಡಿ ಇಮ್ತಿಯಾಜ್ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ |
| 32 | ಶ್ರೀ. ಉದಯ್ ಶೆಟ್ಟಿ | |
| 33 | ಶ್ರೀ. ರಾಘವಿ ನಾಯಕ್ | ರಾಷ್ಟ್ರೀಯ ಜೀವನೋಪಾಯ ಮಿಷನ್ |
| 34 | ಶ್ರೀ. ಎನ್ ಆರ್ ವೇಣುಗೋಪಾಲ್ | ಸಿಒಒ, ಸ್ಕಿಲ್, ಎನ್‌ಎಲ್‌ಎಂ |
| 35 | ಶ್ರೀ. ರಾಜೇಶ್ವರಿ ಎಸ್. | ಇಂಧನ ಇಲಾಖೆ |
| 36 | ಶ್ರೀ. ಡಿ.ಕೊಡದಪಾಣಿ, ನಿರ್ದೇಶಕರು, ತಾಂತ್ರಿಕ | ಇಂಧನ ಇಲಾಖೆ |
| 37 | ಶ್ರೀ. ಎಚ್.ಜೆ.ರಮೇಶ್, ತಾಂತ್ರಿಕ ನಿರ್ದೇಶಕರು | ಬೆಸ್ಕಾಂ |
| 38 | ಶ್ರೀ. ಸುಜೀತ್ ಕುಮಾರ್, ಪಿಜಿಎಂ (ಸಿಎಂ) | ಬಿಎಸ್‌ಎನ್‌ಎಲ್ |
| 39 | ಶ್ರೀ. ಜಿಕೆ ಸುತಾರ್ | ಉಪ ಮಹಾನಿರ್ದೇಶಕರು, ದೂರಸಂಪರ್ಕ ಇಲಾಖೆ |
| 40 | ಶ್ರೀ. ಎನ್ ಸುಜಾತಾ | ಸಿಜಿಎಂ, ಬಿಎಸ್‌ಎನ್‌ಎಲ್ |
| 41 | ಶ್ರೀ. ಸಂತೋಷ್ ಕುಮಾರ್ ಟಿ. | ಎಡಿಟಿಪಿ, ನಗರ ಯೋಜನೆ |
| 42 | ಶ್ರೀಮತಿ ಯುಮ್ನಾ ಎನ್ | ಸಿಇ,(ಒಎಫ್ ಸಿ, ಬಿಬಿಎಂಪಿ) |

| | | |
|---|---|---|
| 43 | ಶ್ರೀ.  ಎಚ್.ಇ. ಕೃಷ್ಣ ಮೂರ್ತಿ | ಪೌರಾಡಳಿತ ನಿರ್ದೇಶನಾಲಯ ಕರ್ನಾಟಕ ಸರ್ಕಾರದ ಅಧಿಕೃತ ಜಾಲತಾಣ,ಜಂಟಿ ನಿರ್ದೇಶಕರುರು |
| 44 | ಶ್ರೀಮತಿ  ವಿಜಯಕುಮಾರಿ ಕೆ.ಸಿ. | ಡಿಎಸ್, ಪಿಡಬ್ಲ್ಯೂಡಿ |
| 45 | ಶ್ರೀ. ಶಿವಣ್ಣ | ದೂರಸಂಪರ್ಕ ಇಲಾಖೆ |
| 46 | ಶ್ರೀ. ದೀಪಕ್ ಎ | ವ್ಯವಸ್ಥಾಪಕರು,ಇವೆಂಟ್ಸ್ ಅಂಡ್ ಪ್ರೊಮೋಷನ್ಸ್,ಕಿಟ್ಸ್ |